KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಏಪ್ರಿಲ್ ೧೫, ೨೦೧೦ (ಚೈತ್ರ ೨೫, ಶಕ ವರ್ಷ ೧೯೩೨)	ಸಂಚಿಕೆ ೧೫

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ 93 ಕೆಎಂಯು 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್, 2010

ಕರ್ನಾಟಕ ಸರ್ಕಾರವು ಪರಿವಿಡಿಯಲ್ಲಿ ವಿವರಿಸಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಲಿಂಗಾಂಬುಧಿಪಾಳ್ಯ ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಇದನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ, 1961ರ ಕಲಂ 4(1)ರ (ಕರ್ನಾಟಕ ಆಕ್ಟ್ ಆಫ್ 1962) ಅಡಿಯಲ್ಲಿ ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು ಕರ್ನಾಟಕ ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಿದೆ. ಈ ಉದ್ದೇಶದಿಂದ ಸದರಿ ದೇವಸ್ಥಾನವನ್ನು ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು 60 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ಕುರಿತಾದ ಆಕ್ಷೇಪಣೆಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ) ವಿಕಾಸ ಸೌಧ, ಬೆಂಗಳೂರು–560 001 ಇವರಿಗೆ ಸಲ್ಲಿಸಬಹುದು.

ಈ ಸ್ಮಾರಕವನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸುವ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳು ಬಾಧಿತದಾರರಿಂದ ಮೇಲ್ಕಾಣಿಸಿದ ಅವಧಿಯೊಳಗೆ ರಾಜ್ಯ ಸರ್ಕಾರವು ಸ್ವೀಕರಿಸಿದಲ್ಲಿ ಸರ್ಕಾರವು ಅದನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವುದು. ತಡವಾಗಿ ಸ್ವೀಕರಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಪರಿವಿಡಿ

(ಅಧಿಸೂಚನೆ ಸಂಖ್ಯೆ: ಕಸಂವಾಪ್ರ 93 ಕೆಎಂಯು 2008 ದಿನಾಂಕ: 19–03–2010)

ಜಿಲ್ಲೆ	ತಾಲ್ಲೂಕು	ಇರುವ ಸ್ಥಳ	ಸ್ಮಾರಕ/ಕಟ್ಟಡದ ಹೆಸರು	ಸಂರಕ್ಷಣೆಗೆ ಒಳಪಡ ಬಹುದಾದ ರೆವಿನ್ಯೂ ನಿವೇಶನ	ವಿಸ್ತೀರ್ಣ	ಮೇರೆಗಳು (ಚೆಕ್ಕುಬಂದಿ)		ಒಡೆತನ	ಷರಾ
ಮೈಸೂರು	ಮೈಸೂರು	ಲಿಂಗಾಂಬುಧಿಪಾಳ್ಯ	ಶ್ರೀ ಮಹಾಲಿಂಗೇಶ್ವರ ದೇವಸ್ಥಾನ	ಸ.ನಂ. 29 – 0.37 ಗುಂಟೆ ಸ.ನಂ. 30 – 1.07 ಗುಂಟೆ	2.04 ಗುಂಟೆ	ಪೂರ್ವಕ್ಕೆ:	ಖಾಲಿ ಜಮೀನು ಹಾಗೂ ರಸ್ತೆ	ಮುಜರಾಯಿ	ಪುರಾತನ ದೇವಸ್ಥಾನ ವಾಗಿರುತ್ತದೆ
						ಪಶ್ಚಿಮಕ್ಕೆ:	ಲಿಂಗಾಂಬುಧಿ ಕೆರೆ		
						ಉತ್ತರಕ್ಕೆ:	ದಟ್ಟಗಳ್ಳಿ ಗಡಿ		
						ದಕ್ಷಿಣಕ್ಕೆ:	ಲಿಂಗಾಂಬುಧಿ ಕೆರೆ		

ಎಂ.ಕೆ. ಭರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ.ಆರ್. 192

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 286 ಎಲ್ಆರ್ಎ 2009, ಬೆಂಗಳೂರು, ದಿನಾಂಕ: 6ನೇ ಮಾರ್ಚ್, 2010

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ (1962ರ 10ನೇ ಸಂಖ್ಯೆಯ) ಕರ್ನಾಟಕ ಕಾಯ್ದೆ ತಿದ್ದುಪಡಿಯಾದಂತೆ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರ. ಸಂ.	ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
1.	ನರಗುಂದ ತಾಲ್ಲೂಕು, ಗದಗ ಜಿಲ್ಲೆ	1. ಶ್ರೀ ನಾಗನಗೌಡ ಲಿಂಗನಗೌಡ ಘಮ್ಮನಗೌಡ್ರು, ಸಾ: ಶಿರೋಳ. ಗದಗ ಜಿಲ್ಲೆ 2. ಶ್ರೀ ಬಸಪ್ಪ ವೀರಪ್ಪ ಕರಿಬಸನ್ನವರ, ಸಾ: ವಾಸನ, ನರಗುಂದ ತಾಲ್ಲೂಕು 3. ಶ್ರೀಮತಿ ಸುಕನ್ಯಾ ಗುರುಲಿಂಗಯ್ಯ ಸಾಲಿ, ಕೆಂಪಗಸಿ ರಸ್ತೆ, ನರಗುಂದ ತಾಲ್ಲೂಕು 4. ಶ್ರೀ ಸಿದ್ಧಾರೂಢ ಜಮದಗ್ನಿ ಪಾತ್ರೋಟ, (ಮೀಸಲಾತಿ) ಸೊದ್ರಾಮೇಶ್ವರ ನಗರ, ನರಗುಂದ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ನಾರಾಯಣಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ)

ಪಿ.ಆರ್. 193

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್ಆರ್ 2008 (A-39), ಬೆಂಗಳೂರು, ದಿನಾಂಕ: 18ನೇ ಮಾರ್ಚ್, 2010

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮಡಿಕೇರಿ ನಗರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಸುರೇಶ ದಾಸವಾಳ, ಮಡಿಕೇರಿ.
2. ಶ್ರೀ ಪಿ.ಆರ್. ನಂದಕುಮಾರ್, ಶ್ರೀ ರಾಘವೇಂದ್ರ ಟ್ರೇಡರ್ಸ್, ಚೌಕಿ, ಮಡಿಕೇರಿ
3. ಶ್ರೀ ಎಂ.ಜಿ. ಜೀವನ್, ನಂ.14/152, ಕೃಷ್ಣಕೃಪ, ನ್ಯೂ ಎಕ್ಸ್‌ಟೆನ್‌ಷನ್, ಮಡಿಕೇರಿ
4. ಶ್ರೀಮತಿ ಶಾರದ ನಾಗರಾಜ, ಅಶೋಕಪುರ, ಮಡಿಕೇರಿ
5. ಶ್ರೀಮತಿ ಬಿ.ಡಿ.ನಳಿನಿ ದೇವಪ್ಪ, ನಗರ ಸಭಾ ಪ್ರಾಥಮಿಕ ಶಾಲೆ ಬಳಿ, ಮಡಿಕೇರಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಆರ್. ರವೀಂದ್ರ

ಪಿ.ಆರ್. 194

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (B-66), ಬೆಂಗಳೂರು, ದಿನಾಂಕ: 18ನೇ ಮಾರ್ಚ್, 2010

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ದೇವದುರ್ಗ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಶಿವಪ್ಪ ಜಕ್ಕಲರ್, ದೇವದುರ್ಗ
2. ಶ್ರೀ ಪಂಪಣ್ಣ ಬಿನ್ ಕೃಷ್ಣಪ್ಪ, ದೇವದುರ್ಗ
3. ಶ್ರೀಮತಿ ಆಶಾ ಬಿ ಕೋಂ ಭುವಾಜೀ, ಗೌರಂಪೇಟೆ, ದೇವದುರ್ಗ
4. ಶ್ರೀ ಮರಿಯಪ್ಪ ಬಿನ್ ಶಿವಪ್ಪ ಕಡೀಮನಿ, ಬಾಪೂಜಿ ಓಣಿ, ದೇವದುರ್ಗ
5. ಶ್ರೀ ಜಿ. ಬಸವರಾಜ್, ವಕೀಲರು, ಗೌರಂಪೇಟೆ, ದೇವದುರ್ಗ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಆರ್. ರವೀಂದ್ರ

ಪಿ.ಆರ್. 195

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (B-76), ಬೆಂಗಳೂರು, ದಿನಾಂಕ: 18ನೇ ಮಾರ್ಚ್, 2010

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಹೂವಿನಹಡಗಲಿ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಸುರೇಶ್‌ಕುಮಾರ್ ಕೊಳ್ಳಿ ಬಿನ್ ವೀರಣ್ಣಕೊಳ್ಳಿ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ
2. ಶ್ರೀಮತಿ ಲತಮ್ಮ ಕೋಂ ಗುಡದಯ್ಯ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ
3. ಶ್ರೀ ಅರಣಿ ಯೂಸುಫ್‌ಖಾನ್ ಬಿನ್ ರಜತ್‌ಸಾಬ್, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ
4. ಶ್ರೀ ಬಿ.ಇ. ಬಸವರಾಜು ಬಿನ್ ಕೊಟ್ರಪ್ಪ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ
5. ಶ್ರೀ ವಿ. ವಸಂತಪ್ಪ ಬಿನ್ ದಾಮೋದರ್, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಆರ್. ರವೀಂದ್ರ

ಪಿ.ಆರ್. 196

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-49), ಬೆಂಗಳೂರು, ದಿನಾಂಕ: 18ನೇ ಮಾರ್ಚ್, 2010

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕುಶಾಲನಗರ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಎಂ.ವಿ. ನಾರಾಯಣ, ವಿನಾಯಕ ಲಾಡ್ಜ್, ಕುಶಾಲನಗರ
2. ಶ್ರೀ ಪಿ.ಪಿ. ಸತ್ಯನಾರಾಯಣ, ಪಾಳಯಂ ಹಾರ್ಡ್‌ವೇರ್, ಕುಶಾಲನಗರ
3. ಶ್ರೀ ಪುಂಡರಿಕಾಕ್ಷ, ವಿನಾಯಕ ಹಾರ್ಡ್‌ವೇರ್, ಕುಶಾಲನಗರ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಆರ್. ರವೀಂದ್ರ

ಪಿ.ಆರ್. 197 ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 233 ಸಿಜಿಇ 2008, ಬೆಂಗಳೂರು, ದಿನಾಂಕ: 25ನೇ ಮಾರ್ಚ್, 2010

ಸರ್ಕಾರದ ಆದೇಶ ಸಂಖ್ಯೆ: ಆಕುಕ 320 ಸಿಜಿಇ 2006 ದಿನಾಂಕ: 24.01.2007ರ ಅನ್ವಯ ದಾವಣಗೆರೆ ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ/ಸಲಹಾ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಿ ಆದೇಶಿಸಿದೆ.

ಕ್ರ. ಸಂ.	ಹೆಸರು ಮತ್ತು ವಿಳಾಸ	ಷರಾ
1.	ಶ್ರೀ ಆರ್.ಎನ್. ಶ್ರೀನಿವಾಸ ಮೂರ್ತಿ ಬಿನ್ ಕೆ.ಆರ್. ನಾಗರಾಜ್, #1023/231, ಜಯನಗರ, ದಾವಣಗೆರೆ	ಸಾಮಾನ್ಯ
2.	ಶ್ರೀ ಕೆ.ಟಿ. ಪರುಶುರಾಮ್ ಬಿನ್ ತಿಪ್ಪಾನಾಯ್ಕ, #836/17, ಸರಸ್ವತಿ ನಗರ, ಎ ಬ್ಲಾಕ್, ದಾವಣಗೆರೆ	ಪರಿಶಿಷ್ಟ ಜಾತಿ ಪ್ರತಿನಿಧಿ
3.	ಶ್ರೀ ಎಸ್. ಸುರೇಶ್ ರಾವ್ ಬಿನ್ ಸಿಂದೆ ಪುಟ್ಟರಾವ್, # 242/2, ಮಹಾರಾಜ ಪೇಟೆ, ಹೆಚ್.ಸಿ. ಗಲ್ಲಿ, ದಾವಣಗೆರೆ	ಸಾಮಾನ್ಯ
4.	ಶ್ರೀ ನಂಜುಂಡಸ್ವಾಮಿ ಬಿನ್ ಲೇಟ್ ಚಿದಾನಂದಯ್ಯ ಎಸ್.ಎಮ್. ಹದಡಿ ಅಂಚೆ ದಾವಣಗೆರೆ ತಾಲ್ಲೂಕು, ದಾವಣಗೆರೆ	ಸಾಮಾನ್ಯ
5.	ಶ್ರೀ ಪರಶುರಾಮ್ ಬಿನ್ ಲಕ್ಷ್ಮಣ್‌ರಾವ್ ರೋಖಡೆ, ಚಿತ್ರಗಾರ ಗಲ್ಲಿ, ದಾವಣಗೆರೆ	ಸಾಮಾನ್ಯ
6.	ಶ್ರೀಮತಿ ಪ್ರೇಮ ಪರಮೇಶ್ವರಪ್ಪ ಕೋಂ ಲೇಟ್ ಪರಮೇಶ್ವರಪ್ಪ, ವಕ್ಕಲಿಗೆರೆ ಪೇಟೆ, ದಾಸಪ್ಪ ಮೆಡಿಕಲ್ಸ್ ಶಾಪ್, ದಾವಣಗೆರೆ	ಮಹಿಳಾ ಪ್ರತಿನಿಧಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಸ್. ಸರೋಜಮ್ಮ

ಪಿ.ಆರ್. 199 ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ENERGY SECRETARIAT

NOTIFICATION

No. EN 68 PSR 2009, Bangalore, Dated: 23rd March, 2010

1.In exercise of the powers conferred by sub-section (5) of section 82 of the Electricity Act 2003, the Government of Karnataka hereby appoint Sri M.R. Sreenivasa Murthy as Chairperson of the Karnataka Electricity Regulatory Commission.

2. The Chairperson of the Commission shall not hold any other office.

3. The term of the Chairperson, KERC, shall be for a period of 5 (five) years from the date he enters upon his office, or till he attains the age of sixty-five years, whichever is earlier. He shall not be eligible for reappointment.

4. The appointment of Chairperson, KERC, is governed by the term of office and conditions of service laid down in Section 89 of the Electricity Act, 2003.

5. The Salary, allowances and other terms and conditions of service of the Chairperson will be governed by Karnataka Electricity Regulatory Commission (Appointment of Chairman & Members) Rules-1999, Karnataka Electricity Regulatory Commission (Chairman & other Members' remuneration, allowances and conditions of Service) Rules, 2000, as amended from time to time.

6. Before he enters upon his office as Chairperson of the Commission, the person shall, as a condition precedent, vacate his office, if any, under the State Government or any Public Sector Undertaking, or any Government body held by him, or is otherwise gainfully employed, or engaged in the service of any person, either by way of resignation or taking voluntary retirement from such services.

By Order and in the name of the Governor of Karnataka

K. JAIRAJ

P.R. 200

Additional Chief Secretary to Government,
Energy Department.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 200 ಎಲ್‌ಆರ್‌ಎ 2009, ಬೆಂಗಳೂರು, ದಿನಾಂಕ: 17ನೇ ಮಾರ್ಚ್, 2010

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ (1962ರ 10ನೇ ಸಂಖ್ಯೆಯ) ಕರ್ನಾಟಕ ಕಾಯ್ದೆ ತಿದ್ದುಪಡಿಯಾದಂತೆ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರ. ಸಂ.	ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
1.	ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ	1. ಶ್ರೀ ತಾಯಪ್ಪ ಬಿನ್ ಹಣಮಂತ (ಮೀಸಲಾತಿ) ಸಾ: ಬದ್ದೇಪಲ್ಲಿ, ತಾಲ್ಲೂಕು ಯಾದಗಿರಿ 2. ಶ್ರೀ ವೆಂಕಟಪ್ಪ ಅವಾಂಗಾಪೂರ, ಸಾ: ನಿರಟ್ಟಿ, ಮೊಹಲ್ಲಾ ಅಂಚೆ, ಗುರುಮಿಠಕಲ್ ತಾಲ್ಲೂಕು ಯಾದಗಿರಿ 3. ಶ್ರೀ ಭಾಸ್ಕರ್ ಬಿನ್ ಗೋವಿಂದರೆಡ್ಡಿ, ಮಾ: ಪಾ: ಅಂಚೆ: ಅನಪೂರ, ಯಾದಗಿರಿ ತಾಲ್ಲೂಕು 4. ಶ್ರೀ ಹನುಮಂತರೆಡ್ಡಿ ಬಿನ್ ತಿಪ್ಪಾರೆಡ್ಡಿ, ಪೊಲೀಸ್ ಪಾಟೀಲ್, ಸಾ: ಮಿನಾಸ್‌ಪುರ, ಯಾದಗಿರಿ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ನಾರಾಯಣಗೌಡ

ಪಿ.ಆರ್. 204

ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ)

COMMERCE AND INDUSTRIES SECRETARIAT

NOTIFICATION

No.CI.289:MMM.2007, Bangalore, Dated: 24th March, 2010

In pursuance of Section 5 read with Section 8 of the Mines and Minerals (Development and Regulation) Act, 1957, and after obtaining prior approval of Government of India, Ministry of Mines, New Delhi vide their letter No.5/28/2008-M.IV dated 07.08.2008, the Government of Karnataka hereby accords sanction for grant of Mining Lease for a period of 30 years (Thirty years only) in favour of Smt M. Yashoda for Manganese ore over an area of 10-05 acres (Ten point zero five acres only) in Mahadevapura village, Holalkere Taluk, Chitradurga District, with the Boundaries as mentioned below and as per the sketch furnished by the Director, Department of Mines and Geology, Bangalore, subject to compliance of the provisions of the Mines and Minerals (Development and Regulation) Act, 1957 and Mineral Concession Rules, 1960 and other applicable Acts and Rules including Forest (Conservation) Act, 1980, Environmental Protection Act, 1986, EIA Notification 2006 etc., as amended from time to time and Rules made there under.

BOUNDARIES:

On the North by	Part of Sy.No.58/2 and Sy.No.60	On the South by	Part of Sy.No.57/4
On the East by	Sy.No.59 and Part of Sy.No.57/3 and 57/4	On the West by	Part of Sy.Nos.58/2, 57/3&4

Sanction of this Mining lease is subject to the necessary clearances like Forest Clearance under Forest (Conservation) Act, 1980, Environmental Clearance under Environmental Protection Act, 1986, Consent for Establishment/Consent for Operation from the KSPCB. Sanction of this Mining lease is also subject to the terms and conditions appended hereto and subject to outcome of writ petition/appeal, if any pending in any court of law in respect of the area covered in this Notification.

The Department of Mines of Geology is directed to take necessary action to measure the area scientifically through GPS and to publish the Digitized Map in the Website.

The Mining lease should be executed only after submission of all the statutory documents/clearances, by the applicant.

By Order and in the name of the Governor of Karnataka

M. VASUDEVAMURTHY

Under Secretary to Government (Mines)

Commerce & Industries Department.

TERMS AND CONDITIONS OF THE MINING LEASE SANCTIONED IN GOVERNMENT NOTIFICATION NO.CI.289:MMM.2007 Dated 24.03.2010.

a) Mining lease should be in respect of **Manganese ore** only. If other minerals are found in association with **Manganese ore,** they should be brought to the notice of Government and if the lessee desires to mine these minerals along with **Manganese ore,** he/she/it should do so only after the consent of Government is obtained in writing.

b) If beryl or any other substance prescribed U/S 3 of the Atomic Energy Act, XXIX of 1948 is found to occur in the property under the lease, the lessee shall make available such mineral to the Government of India.

c) The lease shall also be subject to the provisions of Rules in Chapter IV of the Minerals Concession Rules, 1960.

d) The lease shall also be subject to the Rules, issued U/S 18 of the Mines & Minerals (D&R) Act, 1957.

e) The lessee shall pay to the Director of Mines and Geology in Karnataka, Bangalore, necessary Security Deposit for due observance of the terms and conditions of the lease in accordance with Rule 32 of the lease issued to him.

f) The lessee shall be governed by all conditions that may be incorporated in the lease deed, to be executed.

g) The lessee shall abide by the rules contained in the Karnataka State Forest Manual, if the lease area covers any forestland.

h) Government shall have the right of purchasing the ore at current market rates.

i) The lease would be determined if the lessee fails to commence execution of the lease deed.

j) The area mentioned above is subject to verification after actual survey and demarcation.

k) The lease shall be for a period of **Thirty Years.**

l) The lessee/s shall pay Royalty, Cesses and Dead rent as prescribed vide Government of India's Notification published in the Gazette of India, Extraordinary, Part II-Section 3-Sub-section(i) vide G.S.R.574(E) dated 13th August 2009 and G.S.R. 575(E) dated 13th August, 2009, respectively.

Local & other Cesses: As prevalent in **Chitradurga** District.

Royalty: At the rate prescribed in Second Schedule to the Mines & Minerals (D&R) Act, 1957 and as amended from time to time.

m) The total area held by the applicant/s under mining lease including the present one, shall not exceed 10 Sq.Km.

n) Mining operations shall not be commenced/conducted unless a qualified manager and other supervisory staff are appointed as required under the Matalliferous Mines Regulations, 1961 and relevant notices are sent to the Director-General of Mines Safety, Dhanbad with a copy of the same to the concerned Director of Mines Safety.

o) The minerals should be value added and the Lessee should adhere to existing National Mineral Policy and Karnataka Mineral Policy, 2008.

M. VASUDEVAMURTHY

P.R. 203 Under Secretary to Government (Mines)

Commerce & Industries Department.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 10 ಸಿಎನ್‌ಎಸ್ 2010, ಬೆಂಗಳೂರು, ದಿನಾಂಕ: 19ನೇ ಮಾರ್ಚ್, 2010

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ

ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಶಂಕರಪ್ಪ ಮಲ್ಲಪ್ಪ ಕಾಳೆ, ಸಾ: ರಾಮಗೇರಿ, ಶಿರಹಟ್ಟಿ ತಾಲ್ಲೂಕು ಇವರನ್ನು **ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಲಕ್ಷ್ಮೇಶ್ವರ** ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 205

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಓ 15 ಸಿಎನ್‌ಎಸ್ 2010, ಬೆಂಗಳೂರು, ದಿನಾಂಕ: 19ನೇ ಮಾರ್ಚ್, 2010

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ., ಸೊರಬ** ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

1. ಶ್ರೀಮತಿ ಪುಷ್ಪಾವತಿ ಕೋಂ ಸಚ್ಚಿದಾನಂದ ಹೆಗಡೆ, ಹರೀಶಿ ಚಂದ್ರಗುತ್ತಿ ಹೋ: ಸೊರಬ ತಾ:
2. ಶ್ರೀ ವಿಜಯಕುಮಾರ್ ಬಿನ್ ಕೆರಿಯಪ್ಪ, ಹೊಸಕೊಪ್ಪ, ಜಡೆಹೋಬಳಿ, ಸೊರಬ ತಾಲ್ಲೂಕು
3. ಶ್ರೀ ಹೆಚ್. ದಾನಪ್ಪ ಬಿನ್ ಲಿಂಗಪ್ಪ, ಓಟೂರು ಕಸಬಾ ಹೋಬಳಿ, ಸೊರಬ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 206

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಓ 16 ಸಿಎನ್‌ಎಸ್ 2010, ಬೆಂಗಳೂರು, ದಿನಾಂಕ: 19ನೇ ಮಾರ್ಚ್, 2010

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ., ಮತ್ತು ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಯಲ್ಲಾಪುರ** ಇವುಗಳ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ., ಯಲ್ಲಾಪುರ ತಾಲ್ಲೂಕು

1. ಶ್ರೀ ಮಹಾಬಲ್ಲೇಶ್ವರ ಜಿ. ಭಟ್ಟ ಶೀಗೇಪಾಲ್ ಪೋ: ಬಾಳಗೀಮನೆ
2. ಶ್ರೀ ಶಾಂತರಾಮ ಶಿದ್ದಿ ಹಿತ್ಲಳ್ಳಿ, ಪೋ: ಹಿತ್ಲಳ್ಳಿ
3. ಶ್ರೀಮತಿ ಸ್ವಾತಿ ರಾಮಕೃಷ್ಣ ಹುಲಸವಾರ ಪೋ: ಬಾಸಲೆ

ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಯಲ್ಲಾಪುರ

1. ಶ್ರೀ ಶ್ರೀಧರ ನರಸಿಂಹ ನೇವನಗದ್ದೆ ಸಾ: ಹಿರಿಯಾಳ್ ಪೋ: ದೇಹಳ್ಳಿ ತಾ: ಯಲ್ಲಾಪುರ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 207

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ